**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ತಿಪಟೂರು**

**ಸಿ.ಸಿ. ನಂ. 809 /2025** **ಪ್ರಾ.ಸಾ – 1**
**ಚಾ.ಸಾ – 1**

**ದಿನಾಂಕ: 13-05-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ರೇಖಾ |
| ಗಂಡನ ಹೆಸರು | : | ನರಸಿಂಹಮೂರ್ತಿ |
| ವಯಸ್ಸು | : | 23 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಹತ್ಯಾಳು ಗ್ರಾಮ , ಕಿಬ್ಬನಹಳ್ಳಿ ಹೋಬಳಿ , ತಿಪಟೂರು ತಾಲ್ಲೂಕು. |

**<u>ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u> :-**

ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ನನಗೆ ಇದೆ ಅವರು ನಮ್ಮ ಊರಿನವರು .

ಚಾಸಾ-2 ನನ್ನ ಗಂಡ , ಚಾಸಾ- 3 ನನ್ನ ಅಣ್ಣ , ಚಾಸಾ-4 ನನ್ನ ಅತ್ತಿಗೆ , ಚಾಸಾ-5 ನನ್ನ ತಂದೆ , ಚಾಸಾ-6 ನನ್ನ ತಾಯಿ.

ಆರೋಪಿತರು ನನ್ನ ಪಕ್ಕದ ಮನೆಯವರಾಗಿದ್ದು , ನಮ್ಮ ಮತ್ತು ಅವರ ನಡುವೆ ಜಮೀನಿನ ಮತ್ತು ಬೇಲಿಯ ವಿಚಾರವಾಗಿ ಆಗಾಗ ಮಾತಿನ ಚಕಾಮಕಿ ನೆಡೆಯುತ್ತಿತ್ತು. ಇದರ ಸಂಬಂದ ನಾನು ಕಿಬ್ಬನಹಳ್ಳಿ ಪೋಲಿಸ ಠಾಣೆಗೆ ಹೋಗಿ ಆರೋಪಿತರನ್ನು ಕರೆಸಿ ಬುದ್ದಿವಾದ ಹೇಳುವಂತೆ ತಿಳಿಸಿದ್ದು , ಆ ಕಾಲಕ್ಕೆ ಪೋಲಿಸರು ನನ್ನ ಸಹಿಗಳನ್ನು ಪಡೆದಿರುತ್ತಾರೆ. ಸದರಿ ಸಹಿಗಳನ್ನು ಯಾವ ಕಾರಣಕ್ಕಾಗಿ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಅರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ, ಹೊಡೆದಿರುವುದಿಲ್ಲ ಮತ್ತು ನನ್ನ ಮಾನಕ್ಕೆ ಧಕ್ಕೆ ಉಂಟು ಮಾಡಿರುವುದಿಲ್ಲ. ಪೋಲಿಸರು ನನಗೆ ಹೇಳಿಕೊಟ್ಟಂತೆ ನಾನು ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಇದನ್ನು ಹೊರತು ಪಡಿಸಿ ನನಗೆ ಬೇರೆ

**CC. No. 809 /2025**

**PW - 1**

ಯಾವುದೇ ಮಾಹಿತಿ ಇಲ್ಲ.

ಸಾಕ್ಷಿಯು ಕಡತದಲ್ಲಿರುವ ಹೇಳಿಕೆ ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಕಡತದಲ್ಲಿರುವ ಕಲಂ 183 ಬಿ ಎನ್ ಎಸ್ ಎಸ್ ರ ಅಡಿಯಲ್ಲಿ ತನ್ನ ಹೇಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 2(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ನಾನು ಕೆಲಸ ಮಾಡುವಾಗ ಆಯ ತಪ್ಪಿ ಬಿದ್ದಿದ್ದು ಈ ಸಂಬಂಧ ತಿಪಟೂರು ಸರ್ಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಆ ಕಾಲಕ್ಕೆ ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ವಾಟೀ ಸವಾಲು : ಮಾನ್ಯ ಸಹಾಯಕ ಅಭಿಯೋಜಕರಿಂದ :-**

ದಿನಾಂಕ 09-03-2025 ರಂದು ಸಂಜೆ 4.15 ಗಂಟೆ ಸಮಯದಲ್ಲಿ ನಾನು ತಿಪಪಟೂರು ಸರ್ಕಾರಿ ಆಸ್ಪತ್ರೆಯಲಿ ಒಳ ರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಚಾಸ—11ರವರ ಅಲಿಲಗೆ ಬಂದು ನಿಪಿ.1 ರಂತೆ ನನ್ನ ಹೇಳಿಕೆ ದೂರನ್ನು ಪಡೆದಿರುತ್ತಾರೆಂದರೆ ಸರಿಯಲ್ಲ.

ದಿನಾಂಕ 13-03-2025 ರಂದು ನಾನು ಚಾಸ—11 ರವರ ಸಮಕ್ಷಮ '' ದಿನಾಂಕ 07-03-2025 ರಂದು -------------------------------- ಕೋರಿ ಕೊಳ್ಳುತ್ತೇನೆ '' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು.

**CC. No. 809 /2025**

**PW - 1**

ದಿನಾಂಕ 07-03-2025 ರಂದು ಬೆಳಗ್ಗೆ 7.30 ಗಂಟೆ ಸಮಯದಲ್ಲಿ ಚಾಸ—2 ರವರು ನೀರಿನ ಟ್ಯಾಂಕ್‌ರ್ ಕರೆದುಕೊಂಡು ಬರಲು ಹೋಗಿದ್ದು ಚಂದ್ರಣ್ಣ ರವರ ಮನೆಯ ಮುಂದಿನ ರಸ್ತೆಯಲ್ಲಿ KA-44 EA -2200 ಬೈಕನ್ನು ನಿಲ್ಲಿಸಿ ಕೊಂಡು ಕಾಯುತ್ತಿದ್ದಾಗ 1 ಮತ್ತು 2ನೇ ಆರೋಪಿ KA 64- 4085 Baja Maxima Auto ದಲ್ಲಿ ಬಂದಿದ್ದು ಚಾಸಾ-2 ರವರಿಗೆ ಗಾಡಿಯನ್ನು ತೆಗೆಯುವಂತೆ ಅವಾಚ್ಯ ಶಬ್ದಗಳಿಂದ ಬೈದರು ಎಂದು ಚಾಸಾ- 2 ನನಗೆ ಬಂದು ತಿಳಿಸಿದರು ಎಂದರೆ ಸರಿಯಲ್ಲ. ಚಾಸಾ-2 ನನ್ನನ್ನು ಕರೆದುಕೊಂಡು ಹೋಗಿದ್ದು ನಾನು ಹೋಗಿ ಯಾಕೆ ಈ ರೀತಿ ಗಲಾಟೆ ಮಾಡುತ್ತಿಯಾ ಆಟೋ ಹೋಗಲು ಜಾಗ ಇದೆ ಹೋಗಿ ಎಂದು ಹೇಳಿದ್ದಕ್ಕೆ 1 ಮತ್ತು 2ನೇ ಆರೋಪಿತರು ನನ್ನ ಮೇಲೆ ಗಲಾಟೆ ಮಾಡಿದ್ದು ನಂತರ ನಾನು ಮನೆಯ ಹತ್ತಿರ ಬಂದು ಚಾಸ—2 ರವ ರ ತೋಟಕ್ಕೆ ಟ್ಯಾಂಕರ್ ಕರೆದುಕೊಂಡು ಹೋಗಲು ಬೈಕ್ ಸ್ಟಾರ್ಟ್ ಮಾಡುವಾಗ ಚಾಸಾ-2 ಪೋನ್ ಮಾಡಿ ಆರೋಪಿತರೆಲ್ಲರೂ ಸೇರಿಕೊಂಡು ಕೈಕಾಲು ಹಿಡಿದುಕೊಂಡು ಹೊಡೆಯುತ್ತಿದ್ದರು ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ನಾವು ಹೋಗಿ ನೋಡಲಾಗಿ ಚಾಸಾ-2 ರವರ ಕೈಕಾಲುಗಳನ್ನು ಹಿಡಿದುಕೊಂಡು ಹೊಡೆಯುತ್ತಿದ್ದರು , ಆಗ ಚಾಸಾ-3 ರಿಂದ 6 ರವರುಗಳು ಹೋಗಿ ಜಗಳವನ್ನು ಬಿಡಿಸುವಾಗ 4ನೇ ಅರೋಪಿ ನನ್ನ ಜುಟ್ಟನ್ನು ಹಿಡಿದು ಎಳದಾಡಿ , ನನ್ನ ತಾಳಿಯನ್ನು ಕಿತ್ತು ಹಾಕಿರುತ್ತಾರೆ. ನಂತರ ಎಲ್ಲರೂ ಸೇರಿ ಗಲಾಟೆ ಮಾಡಿದರು ಎಂದರೆ ಸರಿಯಲ್ಲ. ನಂತರ ಚಾಸಾ-3 ದೂರನ್ನು ನೀಡಲು ಹೋಗುವಾಗ 3ನೇ ಅರೋಪಿ ಚಾಸ—3 ರವರಿಗೆ ಕಾಲಿನಿಂದ ಒದ್ದಿದ್ದು ಬಿಡಲು ನಾನು ಹೋದಾಗ 3ನೇ ಅರೋಪಿ ನನ್ನ ನೈಟಿಯನ್ನು ಹಿಡಿದು ಹರಿದು ಹಾಕಿ ಹಲ್ಲಿದಿಂದ ಕೈಯನ್ನು ಕಚ್ಚಿ ರುತ್ತಾನೆ ಎಂದರೆ ಸರಿಯಲ್ಲ. ಇದರಂತೆ ನಾನು ನನ್ನ ಹೇಳಿಕೆ ದೂರನ್ನು ನೀಡಿರುತ್ತೇನೆ ಎಂದರೆ ಸ ರಿಯಲ್ಲ.

ನಂತರ ದಿನಾಂಕ 11-03-2025 ರಂದು ನಾನು ಹಿರಿಯ ಶ್ರೇಣಿ ಸಿವಿಲ್ನ್ಯಾ ಯಾಧಿಶರು ಮತ್ತು ಜೆ ಎಂ ಎಫ್ ಸಿ ತಿಪಟೂರು ರವರ ಸಮಕ್ಷಮ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಪೋಲಿಸರು ಹೇಳಿ ಕ್ಟೊಟಂತೆ ಹೇಳಿಕೆ ನೀಡಿರುತ್ತೇನೆಎಂದು

**CC. No. 809 /2025**

**PW - 1**

ನುಡಿಯುತ್ತಾರೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಿಲ್ಲ. ಸಾಕ್ಷಿ ಕಡತದಲ್ಲಿರುವ ಭಾವ ಚಿತ್ರವನ್ನು ತೋರಿಸಲಾಗಿ ಅದರಲ್ಲಿರುವ ಬೈಕನ್ನು ನೋಡಿ ಗುರುತಿಸಿರುವುದಿಲ್ಲ.

ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ರಾಜೀ ಮಾಡಿಕೊಂಡ ಕಾರಣ ಸುಳ್ಳು ಸಾಕ್ಷ್ಯ ನಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲು : ಏನೂ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**

**CC. No. 809 /2025**

**PW - 1**